# ಪ್ರಾರ್ಥನೆ

**ಶ್ರೀಕೃಷ್ಣಚೈತನ್ಯರಿಂದ ರಚಿತವಾದ ಶಿಕ್ಷಾಷ್ಟಕದಿಂದ**

ನಾಮ್ನಾಮಕಾರಿ ಬಹುಧಾ ನಿಜಸರ್ವಶಕ್ತಿ-
ಸ್ತತ್ರಾರ್ಪಿತಾ ನಿಯಮಿತಃ ಸ್ಮರಣೇ ನ ಕಾಲಃ |
ಏತಾದೃಶೀ ತವ ಕೃಪಾ ಭಗವನ್ ಮಮಾಪಿ
ದುರ್ದೈವಮೀದೃಶಮಿಹಾಜನಿ ನಾನುರಾಗಃ ||

ನಿನ್ನ ನಾಮಗಳು ಹಲವು ಬಗೆಯಿಂದ ವ್ಯಕ್ತವಾಗಿವೆ; ಅವುಗಳಲ್ಲಿ ನಿನ್ನ ಸರ್ವಶಕ್ತಿಯನ್ನೂ ತುಂಬಿರುವೆ; ನಿನ್ನ ನಾಮಸ್ಮರಣೆ ಮಾಡಬೇಕಾದರೆ ಇಂತಹ ಕಾಲದಲ್ಲೇ ಅದನ್ನು ಮಾಡಬೇಕೆಂಬ ವಿಧಿಯಿಲ್ಲ; ನಿನ್ನ ಕೃಪೆ ಹೀಗಿದ್ದರೂ, ಹೇ ಭಗವಂತ, ದುರ್ದೈವ ವಶದಿಂದ ನನಗೆ ಈ ಜನ್ಮದಲ್ಲೂ ನಿನ್ನ ಮೇಲೆ ಅನುರಾಗ ಹುಟ್ಟಲಿಲ್ಲ.

ತೃಣಾದಪಿ ಸುನೀಚೇನ ತರೋರಪಿ ಸಹಿಷ್ಣುನಾ |
ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ ||

ತೃಣಕ್ಕಿಂತಲೂ ನಮ್ರನಾಗಿ, ಮರಕ್ಕಿಂತಲೂ ಸಹನೆಯುಳ್ಳವನಾಗಿ, ತನ್ನ ಅಭಿಮಾನವನ್ನು ತೊರೆದು, ಇತರರಿಗೆ ಮನ್ನಣೆಯನ್ನು ಕೊಡುತ್ತ ಯಾವಾಗಲೂ ಶ್ರೀಹರಿಯ ಕೀರ್ತನೆಯನ್ನು ಮಾಡಬೇಕು.

ನ ಧನಂ ನ ಜನಂ ನ ಸುಂದರೀಂ
ಕವಿತಾಂ ವಾ ಜಗದೀಶ ಕಾಮಯೇ |
ಮಮ ಜನ್ಮನಿ ಜನ್ಮನೀಶ್ವರೇ
ಭವತಾದ್ಭಕ್ತಿರಹೈತುಕೀ ತ್ವಯಿ ||

ಹೇ ಜಗದೀಶ, ನನಗೆ ಧನ ಬೇಡ, ಜನ ಬೇಡ, ಸುಂದರಿಯಾದ ಯುವತಿಯೂ ಬೇಡ, ಕವಿತ್ವಶಕ್ತಿಯೂ ಬೇಡ; ಆದರೆ ನನಗೆ ಪ್ರತಿ ಜನ್ಮದಲ್ಲಿಯೂ ಈಶ್ವರನಾದ ನಿನ್ನಲ್ಲಿ ನಿಸ್ವಾರ್ಥವಾದ ಭಕ್ತಿಯಿರಲಿ.

ನಯನಂ ಗಲದಶ್ರುಧಾರಯಾ
ವದನಂ ಗದ್ಗದರುದ್ಧಯಾ ಗಿರಾ |
ಪುಲಕೈರ್ನಿಚಿತಂ ವಪುಃ ಕದಾ
ತವ ನಾಮಗ್ರಹಣೇ ಭವಿಷ್ಯತಿ ||

ನಿನ್ನ ನಾಮವನ್ನು ಉಚ್ಚರಿಸಿದಾಗ ಎಂದು ನನ್ನ ಕಣ್ಣುಗಳಲ್ಲಿ ಆನಂದಾಶ್ರುಗಳು ಹರಿದು, ಬಾಯಲ್ಲಿ ಮಾತುಗಳು ನಿಂತುಹೋಗಿ, ಶರೀರವು ಪುಲಕದಿಂದ ತುಂಬುವುದು?

# ಸೂಕ್ತಿಪ್ರಭ

ಯಾವುದೇ ಉಗಿ ಅಥವಾ ಅನಿಲವಾಗಲಿ ಅದನ್ನು ಒಂದು ಕಡೆ ಹಿಡಿದಿರಿಸದಿದ್ದರೆ ಅದು ಏನನ್ನೂ ಓಡಿಸಲಾರದು. ಹಾಗೆಯೇ ಜೀವನವನ್ನು ಕೂಡ ಶಿಸ್ತುಗೊಳಿಸಿ ನಿರ್ದೇಶಿಸಿ ಸಮರ್ಪಿಸದಿದ್ದರೆ ಅದು ಶ್ರೇಷ್ಠ ಮಟ್ಟಕ್ಕೆ ಬೆಳೆಯುವುದಿಲ್ಲ.

— ಹ್ಯಾರಿ ಎಮರ್ಸನ್.

ಕ್ರಿಯಾಶೀಲವಾದ ಸ್ವಲ್ಪ ಜ್ಞಾನವು ನಿಷ್ಕ್ರಿಯವಾದ ಅಪಾರ ಜ್ಞಾನಕ್ಕಿಂತ ಅನಂತ ಪಾಲು ಮೇಲು. — ಖಲೀಲ್ ಜಿಬ್ರಾನ್

ಸಂಪತ್ತಿನ ಸಮಯದಲ್ಲಿ ಸ್ನೇಹಿತರು ನಮ್ಮನ್ನು ತಿಳಿಯುತ್ತಾರೆ, ವಿಪತ್ತಿನಲ್ಲಿ ನಾವು ಸ್ನೇಹಿತರನ್ನು ಅರಿಯುತ್ತೇವೆ.

—ಅನಾಮಿಕ.

ತಾನು ಪ್ರೀತಿಗೆ ಅರ್ಹನಲ್ಲ ಎಂಬ ಅಜ್ಞಾತ ಭಯವೇ ಪ್ರೀತಿಗಿರುವ ಅತಿ ದೊಡ್ಡ ಅಡಚಣೆ.

—ಜು ಆನ್ ಪಾಬ್ಲೊ ವಾಲ್ಡೀಸ್.

ಜನರ ನೆನಪಿನಲ್ಲಿ ಉಳಿಯುವುದಕ್ಕೆ ಎರಡೇ ಮಾರ್ಗ — ಸಮಸ್ಯಾ ಪರಿಹಾರ ಮತ್ತು ಸಮಸ್ಯಾ ಸೃಷ್ಟಿ. —ಮೈಕ್ ಮುರ್ಡಾಕ್.

ಅಕೃತ್ವಾ ಪರಸಂತಾಪಮಗತ್ವಾ ಖಲನಮ್ರತಾಮ್ |
ಅನುತ್ಸೃಜ್ಯ ಸತಾಂ ವರ್ತ್ಮ ಯತ್ ಸ್ವಲ್ಪಮಪಿ ತದ್ಬಹು ||

ಇತರರನ್ನು ನೋಯಿಸದೆ, ದುಷ್ಟರಿಗೆ ತಲೆಬಾಗದೆ, ಸಜ್ಜನರ ಮಾರ್ಗವನ್ನು ಬಿಡದೆ ಎಷ್ಟು ಸ್ವಲ್ಪ ಕಾರ್ಯವನ್ನು ಎಸಗಿದರೆ ಅದೇ ಮಹತ್ವದ್ದು. —ಸುಭಾಷಿತ

ಸ್ವಾಭಾವಿಕವಾದ ಸಮನ್ವಯವು ನಾಶವಾದಾಗ ಸದ್ಗುಣ ಉಂಟಾಗುತ್ತದೆ ; ಸದ್ಗುಣವು ಹೊರಟುಹೋದಾಗ ನ್ಯಾಯ ಬರುತ್ತದೆ ; ನ್ಯಾಯವೂ ಇಲ್ಲವಾದಾಗ ಕ್ರಿಯಾವಿಧಿಗಳು (*ritualism*) ಹುಟ್ಟಿಕೊಳ್ಳುತ್ತದೆ.

—ಲಾ ಓಟ್ಸೆ